maintain roster system. That is why if you go on regularising their services, the SC/ST and backward class people will be affected. I want to know from the Minister what is the policy of the Government in recruitment in all the Universities?

ಶ್ರೀ ಡಿ. ಮಂಜುನಾಥ್.—ವಿಶ್ವವಿದ್ಯಾನಿಲಯಗಳಲ್ಲಿ ಹೊಸಲಾ ಆ ರೀತಿ ನಡೆಯುತ್ತಿತ್ತು. ಈಗ ಜಾಹಿರಾತು ಮಾಡುವಾಗಲೇ ಕ್ಲಾಸಿಫೈ ಮಾಡಿ ಮಾಡುವುದರಿಂದ ರೋಸ್ಟರ್ ಪದ್ಧತಿಗೆ ತೊಂದರೆಯಾಗಲಾರದೆಂದು ನಾವು ಭಾವಿಸಿದ್ದೇವೆ. ಈಗ ಅವರು ಇಂತಿಂಥ ಖಾಲಿ ಇರತಕ್ಕ ಹುದ್ದೆಗಳು ಇಂತಿಂಥವರಿಗೆ ಎಂದು ಜಾಹಿರಾತು ಮಾಡುತ್ತಾರೆ.

ಶ್ರೀ ವೇದಾಂತ ಹೆಬ್ಬಾರ್.—ನಾಲ್ಕು ಜನಕ್ಕೆ ಸಹಾಯ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ತಾವು ಧರ್ಮಕ್ಕೆ ಈ ಕೆಲಸ ಮಾಡಬೇಕಾಗಿಲ್ಲ ಅವರುಗಳು ಸಾಕಷ್ಟು ಓದಿ ಪರಿಶ್ರಮ ಪಡೆದು ಅಲ್ಲಿ ನಿಂತಿದ್ದಾರೆ. ೨೬ ಜನರಲ್ಲಿ ೬ ಜನ ಹರಿಜನರು ಇದ್ದಾರೆ. ೨೬ ಜನರನ್ನು ಖಾಯಂ ಮಾಡುವಂತೆ ಆದೇಶ ಕೊಡಬೇಕೆಂದು ನಾನು ಹೇಳುತ್ತೇನೆ. Otherwise let them appoint according to merit.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ ಅನ್ಯಾಯವಾಗಿದ್ದರೆ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಪರಿಶಿಷ್ಟ ಜಾತಿಯವರಿಗೆ ಅನ್ಯಾಯವಾಗದಂತೆ ನಾನು ನೋಡಿಕೊಳ್ಳುತ್ತೇನೆ.

ಶ್ರೀ ಕೆ.ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ವಾಸಪದತ್ತ ಸಿಮೆಂಟ್ ಕಾರ್ಖಾನೆಯ ಕೈಸರ್ ಮಿಲ್‌ನಲ್ಲಿ ಕೆಲಸ ಮಾಡುವ ನಾಲ್ಕು ಜನ ಕಾರ್ಮಿಕರು ಅಪಘಾತಕ್ಕೆ ಒಳಪಟ್ಟು ಮೃತಪಟ್ಟಿರುವುದರ ಬಗ್ಗೆ ಮಾನ್ಯ ಕಾರ್ಮಿಕ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ನನಗಿನ್ನು ನೋಟೀಸು ಬಂದಿಲ್ಲ. ಉತ್ತರ ತರಿಸಿಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ರಾಜ್ಯದ ಮೂಲೆ ಮೂಲೆಗಳಿಂದ ಬಂದಿರುವಂಥ ಸುಮಾರು ಹತ್ತು ಸಾವಿರ ಗುತ್ತಿಗೆ ಮೇರೆಗೆ ನೇಮಕಗೊಂಡಿರುವ ಶಿಕ್ಷಕರು ಕಾಯಂ ಮಾಡಬೇಕೆಂದು ಬೃಹತ್ ಪ್ರದರ್ಶನ ನಡೆಸಿರುವ ಬಗ್ಗೆ ಶಿಕ್ಷಣ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಡಿ. ಮಂಜುನಾಥ್.—ಸ್ವಾಮಿ, ಈ ವಿಷಯವನ್ನು ಸೋಮವಾರಕ್ಕೆ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಸೋಮವಾರ ಹೇಳಿಕೆ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸ್ವಾಮಿ, ಇದು ತುಂಬಾ ಗಂಭೀರವಾದಂಥ ಸಂಗತಿ. ಖಾಯಂ ಮಾಡುತ್ತಾರೆಂದು ಅವರೆಲ್ಲರೂ ಬೆಂಗಳೂರಿನಲ್ಲಿಯೇ ಉಳಿದುಕೊಂಡಿದ್ದಾರೆ. ಅಧಿಕೃತವಾಗಿ ಒಂದು ಹೇಳಿಕೆ ಕೊಟ್ಟರೆ ಅವರಿಗೆ ನೆಮ್ಮದಿಯಾಗುತ್ತದೆ.

ನಿಯಮ ೩೩೫ರ ಮೇರೆಗೆ

(1) ಎ. ಎನ್. ಸಿ. ಸಪ್ಲೈ ಡಿಪೋದಲ್ಲಿ ಕೆಲಸ ಮಾಡುತ್ತಿರುವ ಹುಲಿಯಪ್ಪ ಎನ್ನುವ ನೌಕರನನ್ನು ಪೋಲೀಸರು ಲಾಕಪ್‌ಗೆ ಹಾಕಿರುವುದು

ಶ್ರೀ ಬಿ. ರಾಜಗೌಡ.—ಮಾನ್ಯ ಅಧ್ಯಕ್ಷರೇ, ಹುಲಿಯಪ್ಪ ಎಂಬುವರು ಬೆಂಗಳೂರಿನ ೫೬, ಕಂಪನಿ ಎ.ಎನ್.ಸಿ. ಸಪ್ಲೈ ಡಿಪೋನಲ್ಲಿ ಒಬ್ಬ ನೌಕರರಾಗಿ ಕೆಲಸ ಮಾಡುತ್ತಿದ್ದಾರೆ. ಅವರು ೯-೩-೮೬ರಂದು ತಮ್ಮ ಸ್ನೇಹಿತನಿಗೆ ಬಸ್ಸಿನಿಂದ ಇಳಿದು ಹೋಗುತ್ತಿರುವಾಗ ಹನೂರು ಪೋಲೀಸ್ ಠಾಣೆಯ ಇಬ್ಬರು ಪೋಲೀಸಿನವರು ನಿನ್ನ ಮೇಲೆ ಕೇಸಿದೆ, ಪೋಲೀಸ್ ಸ್ಟೇಷನ್‌ಗೆ ಬರಬೇಕೆಂದು ಬಲಾತ್ಕಾರವಾಗಿ ಎಳೆದು ಪೋಲೀಸ್ ವ್ಯಾನಿನಲ್ಲಿ ಹಾಕಿಕೊಂಡು ಹನೂರು ಪೋಲೀಸ್

ಠಾಣೆಗೆ ಕರೆದುಕೊಂಡು ಹೋಗಿ ಬಟ್ಟೆಗಳನ್ನು ಕಳಚಿ ಲಾಕಪ್‌ಗೆ ತಳ್ಳಿಬಿಟ್ಟರು. ರಾತ್ರಿ ಸುಮಾರು ೧೨ ಗಂಟೆಗೆ ಸ್ಟೇಷನ್‌ಗೆ ಸಬ್‌ಇನ್ಸ್‌ಪೆಕ್ಟರ್ ಬಂದು ನಿಮ್ಮ ಅಣ್ಣನ ಮಗನ ಹೆಂಡ್ತಿ ಬಾವಿಗೆ ಬಿದ್ದು ಸತ್ತಿದ್ದಾಳೆ. ಅವಳ ಗಂಡನಿಂದಲೇ ಆಕೆ ಸತ್ತಿರುವುದು. ನಿಮ್ಮ ಅಣ್ಣನ ಮಗನನ್ನು ತಂದು ಒಪ್ಪಿಸದಿದ್ದರೆ, ನಿನ್ನನ್ನು ಇಲ್ಲೆ ಕೊಳೆಯಿಸಿ ಸಾಯಿಸುತ್ತೇನೆ ಎಂಬುದಾಗಿ ಹೇಳಿ, ಆತನಿಗೂ ಊಟ ತಿಂಡಿ ಕೊಡದೆ ರಾತ್ರಿಯೆಲ್ಲಾ ಲಾಕಪ್‌ನಲ್ಲಿ ಇರಿಸಿದರು. ಹುಲಿಯಪ್ಪ ಪೋಲೀಸ್ ಸ್ಟೇಷನ್‌ನಲ್ಲಿ ಹೊಟ್ಟೆ ಹಸಿವಿನಿಂದ ರಳುತ್ತಿರುವಾಗ ೧೦-೬-೦೬ರ ಮಧ್ಯಾಹ್ನ ಈತನ ಅಣ್ಣನ ಮಗನು ತನ್ನ ಹೆಂಡತಿ ಕಾಣೆಯಾಗಿದ್ದಾಳೆಂದು ದೂರು ಕೊಡಲು ಬಂದಾಗ ಆತನನ್ನು ಪೋಲೀಸ್ ಸ್ಟೇಷನ್‌ನಲ್ಲಿ ಇರಿಸಿಕೊಂಡರು. ಬಾವಿಗೆ ತಾನಾಗಿಯೇ ಬಿದ್ದು ಸತ್ತಿರುವುದೆಂದು ನಂತರ ವೈದ್ಯಕೀಯ ಪರೀಕ್ಷೆ ಇಂದ ತಿಳಿದು ಬಂದಿತು, ಆಗ ಹುಲಿಯಪ್ಪನನ್ನು, ಆಕೆಯ ಗಂಡನನ್ನು ಶವಸಂಸ್ಕಾರಕ್ಕೂ ಬಿಡಲಿಲ್ಲ. ಮೂರು ದಿನಗಳ ಕಾಲ ಠಾಣೆಯಲ್ಲಿಟ್ಟುಕೊಂಡು ೧೩-೬-೦೬ರಂದು ಬಿಡುಗಡೆ ಮಾಡಿದರು. ಈ ಬಗ್ಗೆ ಪೋಲೀಸ್ ಇಲಾಖೆಯ ಎಲ್ಲಾ ವರ್ಗದ ಅಧಿಕಾರಿಗಳಿಗೂ ಹುಲಿಯಪ್ಪ ದೂರು ಕೊಟ್ಟಾಗ್ಯೂ ಸಹ ಇದುವರೆವಿಗೂ ಯಾವ ರೀತಿಯ ವಿಚಾರಣೆ ಮಾಡಲಿಲ್ಲ. ಇದಾದನಂತರ ಕೂಳ್ಳೇಗಾಲದ ಪ್ರಾಥಮಿಕ ಸಹಕಾರ ಕೃಷಿ ಹಾಗೂ ಗ್ರಾಮೀಣ ಬ್ಯಾಂಕಿನ ನಿರ್ದೇಶಕರಾದ ಶ್ರೀ ಹಲಗೇಗೌಡರನ್ನು ಸಹಾ ಡಿ.ಎಸ್.ಪಿ. ಕರೆದುಕೊಂಡು ಹೋಗಿ ದೊಣ್ಣೆ ಮುರಿದು ಹೋಗುವ ವರೆವಿಗೂ ಹೊಡೆದಿದ್ದಾರೆ. ಈ ಬಗ್ಗೆಯೂ ಸಹ ಮಾನ್ಯ ಗೃಹ ಸಚಿವರಿಗೆ ಪತ್ರ ಬರೆದಿರುತ್ತೇನೆ. ಇವರ ಬಗ್ಗೆ ಕೂಡ ಯಾವ ವಿಚಾರಣೆ ಇಲ್ಲವಾಗಿದೆ. ಕೊನೆಗೆ ಈ ಸದನದ ಮುಖಾಂತರವಾದರೂ ಮಾನ್ಯ ಗೃಹ ಸಚಿವರ ಗಮನವನ್ನು ಸೆಳೆದು, ಆ ಸಬ್-ಇನ್ಸ್‌ಪೆಕ್ಟರ್‌ರವರಿಂದ ಸಮಜಾಯಿಸಿ ತರಿಸಿ, ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆಗ್ರಹ ಪೂರ್ವಕವಾಗಿ ವಿನಂತಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಈಗತಾನೇ ಈ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದಾರೆ. ವಿಚಾರಣೆ ಮಾಡಿ, ತಕ್ಕ ಕ್ರಮ ತೆಗೆದುಕೊಳ್ಳುತ್ತೇನೆ.

(II) ಪುತ್ತೂರು ತಾಲ್ಲೂಕಿನ ಸವಣೂರು ಪಣ್ಣಪ್ಪಾಡಿ ಗ್ರಾಮಗಳಲ್ಲಿ ನೀರಾವರಿ ಪಂಪ್ ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದು

ಶ್ರೀ ಕೆ. ಕುಶಾಲ.—ಮಾನ್ಯ ಅಧ್ಯಕ್ಷರೇ, ಸುಳ್ಯ ವಿಧಾನಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿನ ಸವಣೂರು ಪಣ್ಣಪ್ಪಾಡಿ ಗ್ರಾಮಗಳಲ್ಲಿ ಮಾರ್ಗದೀಪ ಮತ್ತು ಕೃಷಿಕರಿಗೆ, ಕೃಷಿ ನೀರಾವರಿ ಪಂಪು ಸೆಟ್ಟುಗಳಿಗಾಗಿ ವಿದ್ಯುತ್ ಮಂಜೂರಾಗಿ ಕಾಮಗಾರಿ ಪ್ರಾರಂಭಿಸಿ, ಕಂಬ, ವೈರಿಂಗ್, ಎಲ್ಲಾ ಕೆಲಸ ಪೂರ್ತಿಗೊಂಡಿದ್ದರೂ, ಈ ಕೆಲಸ ಮುಗಿದಿದ್ದು ಒಂದೂವರೆ ವರ್ಷಗಳು ಕಳೆದರೂ ಈ ವಿದ್ಯುತ್ ಲೈನಿನ ಪಕ್ಕದಲ್ಲಿ ರೈಲ್ವೆ ಲೈನ್ ಕ್ರಾಸ್ ಪಾಸಾಗುವುದು ಎಂಬ ನೆಪ ಹೇಳಿ ಈ ತನಕ ಇಲಾಖೆ ಯಾವುದೇ ತ್ವರಿತ ಕ್ರಮ ಕೈಕೊಳ್ಳದೆ ಇರುವುದು ಶೋಚನೀಯ. ಈ ಎರಡು ಗ್ರಾಮಗಳ ಸಾರ್ವಜನಿಕರು, ವಿದ್ಯುತ್ ಸೌಲಭ್ಯ ಪಡೆದು, ಕೃಷಿ ಪಂಪುಸೆಟ್ಟು, ಬ್ಯಾಂಕ್ ಸಾಲ ಪಡೆದು ಮತ್ತು ಇತರೆ ಹಣ ವೆಚ್ಚ ಮಾಡಿ ಬ್ಯಾಂಕ್ ಸಾಲಗಳನ್ನು ಎರಡು ವರ್ಷಗಳಿಂದ ಮರುಪಾವತಿ ಮಾಡಿ ಆಗಿದ್ದರೂ, ಮೋಟಾರು ಅಳವಡಿಸಿ ಕೃಷಿ ಸಾಗುವಳಿ ಮಾಡಲು, ನೀರು ಹಾಯಿಸಲು ವಿದ್ಯುತ್ ಸೌಲಭ್ಯ ಇನ್ನೂ ದೊರೆಯದೆ ತುಂಬಾ ಕಂಗೆಟ್ಟಿದ್ದಾರೆ.

ಸುಳ್ಯ ವಿಧಾನ ಸಭಾ ಕ್ಷೇತ್ರದ ಪುತ್ತೂರು ತಾಲ್ಲೂಕಿನ ಬಿಳಿನೆಲೆ ನೆಟ್ಟಣ ಕೃಷಿಕರು, ಕಳೆದ ೩ ವರ್ಷಗಳ ಹಿಂದಿನಿಂದ ಪಣ ಕಟ್ಟಿ ಕೃಷಿಗೆ ನೀರಾವರಿ ಪಂಪುಸೆಟ್ಟು ಪಡೆದು, ಸಾಲದ ಕಂತು ಮರು ಪಾವತಿ ಬ್ಯಾಂಕಿಗೆ ಮಾಡುತ್ತಿದ್ದರೂ, ಈ ವಿದ್ಯುತ್ ಪೂರೈಕೆಯ ಕೆಲಸ ೩ ವರ್ಷಗಳಾದರೂ ಪೂರ್ತಿಗೊಳಿಸದೆ, ವಿದ್ಯುತ್ ಪೂರೈಕೆ ಆಗಿರುವುದಿಲ್ಲ. ಕೃಷಿಕರು ನೀರು ಹಾಯಿಸಿ, ಬೆಳೆ ಬೆಳೆಸಲು ಅಸಹಾಯಕರಾಗಿದ್ದಾರೆ.

ಬಿಳಿನೆಲೆ ನೆಟ್ಟಣಕ್ಕೆ ಮಂಜೂರಾದ ವಿದ್ಯುತ್ ಪೂರೈಕೆ ಕೆಲಸವು ಸಂಪೂರ್ಣ ಪೂರ್ತಿಗೊಳ್ಳದೆ ಬಾಕಿ ಇದ್ದರೂ, ಆ ಕೆಲಸವನ್ನು ತಟಸ್ಥಗೊಳಿಸಿ, ಅದನ್ನು ಇತರ ಕಡೆಗೆ ಹೊಸದಾಗಿ ವಿದ್ಯುತ್ ಪೂರೈಕೆ ಕೇಳಿದವರಿಗೆ ದೊಡ್ಡ ಬಂಡವಾಳ ಶಾಹಿಗಳ ಪ್ರಭಾವಕ್ಕೆ ಒಳಗಾಗಿ ಅಧಿಕಾರಿಗಳು ಪ್ರಯತ್ನಿಸುತ್ತಿರುವ ವದಂತಿ ಕೂಡ ಇದೆ. ಆದುದರಿಂದ ಈ ಎರಡೂ ಕಡೆಗಳ ವಿದ್ಯುತ್ ಪೂರೈಕೆ ಕೆಲಸವನ್ನು ಆದಷ್ಟು ಶೀಘ್ರದಲ್ಲಿ ಪೂರೈಸುವಂತೆ ಸೂಕ್ತ ಕ್ರಮವನ್ನು ಕೈಗೊಳ್ಳಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.